ಕನ್ನಡಪ್ರಭ

ಸೋಮವಾರ 26 ಏಪ್ರಿಲ್ 2010

## ಟೆಲಿಫೋನ್‌ಗೆ ಕಳ್ಳಗಿವಿ ಜೋಡಣೆ

ರಾಜಕೀಯದ ತಳಮಳದ ದಿನಗಳಲ್ಲಿ ಅಧಿಕಾರಸ್ಥ ರಾಜಕಾರಣಿಗಳು ತಮ್ಮ ಎದುರಾಳಿಗಳ ಚಲನವಲನ ಹಾಗೂ ತಂತ್ರಗಳನ್ನು ತಿಳಿದುಕೊಳ್ಳಲು ಅವರ ಟೆಲಿಫೋನ್‌ಗಳನ್ನು ಕದ್ದು ಕೇಳುವುದು ರಹಸ್ಯವೇನೂ ಅಲ್ಲ. ಅದನ್ನು ತಿಳಿದೇ ಈಗ ಅನೇಕ ರಾಜಕಾರಣಿಗಳು ನಿಜವಾಗಲೂ ರಹಸ್ಯವೆನ್ನಬಹುದಾದ ವಿಚಾರಗಳನ್ನು ತಿಳಿಸಲು ತಮ್ಮದಲ್ಲದ ಟೆಲಿಫೋನ್ ಬಳಸುವುದು.

ನಿಜ. ಟೆಲಿಫೋನ್‌ಗಳಿಗೆ ಕಳ್ಳಕಿವಿಯನ್ನು ಜೋಡಿಸುವುದು/ ಪ್ರತಿನಿತ್ಯ 24 ಗಂಟೆ ನಡೆಯುವ ಪ್ರಕ್ರಿಯೆ ಅಲ್ಲ. ಒಂದು ರೀತಿಯ ಆಪತ್ಕಾಲೀನ ವ್ಯವಸ್ಥೆ ಅದು. ಈಗ ದೆಹಲಿ ಮೂಲದ ಔಟ್‌ಲುಕ್ ಸಾಪ್ತಾಹಿಕ ಪ್ರಕಟಿಸಿರುವ ಟೆಲಿಫೋನ್‌ಗಳಿಗೆ ಕಳ್ಳಕಿವಿಗಳನ್ನು ಜೋಡಿಸಿದ ಆರೋಪ ಸೋಮವಾರ ಸಂಸತ್ತಿನಲ್ಲಿ ದೊಡ್ಡ ಅವಾಂತರವನ್ನೇ ಸೃಷ್ಟಿಸುವ ಸಂಭವವಿದೆ. ಇಂಡಿಯನ್ ಪ್ರೀಮಿಯರ್ ಲೀಗ್, ಲಲಿತಮೋಹನ ಮೋದಿ, ಶಶಿ ತರೂರು ಅವರೆಲ್ಲ ಸಂಸತ್ತಿನ ರಾಡಾರ್‌ಗಳಿಂದ ದೂರ ಉಳಿಯಬಹುದು.

ಅದಕ್ಕೆ ಕಾರಣ ಔಟ್‌ಲುಕ್ ಪತ್ರಿಕೆಯ ವಿಶೇಷ ತನಿಖಾ ವರದಿಯಲ್ಲಿ ಕೇಂದ್ರ ಸಚಿವ ಹಾಗೂ ರಾಷ್ಟ್ರೀಯತಾ ಕಾಂಗ್ರೆಸ್ಸಿನ ಪ್ರಮುಖ ಶರದ್ ಪವಾರ್ ಹಾಗೂ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ, ಮಧ್ಯ ಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ಅವರ ಹೆಸರುಗಳನ್ನೂ ಸೇರಿಸಿರುವುದು. ಈಗ ಕಾಂಗ್ರೆಸ್ ವಿರೋಧಿ ಪಕ್ಷಗಳ ನಾಯಕರಾದ ನಿತೀಶ್ ಕುಮಾರ್, ಪ್ರಕಾಶ್ ಕಾರಟ್ ಅವರ ಹೆಸರುಗಳಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಪ್ರಜೆಗಳ ಟೆಲಿಫೋನ್ ಸಂಭಾಷಣೆಯನ್ನು ಪ್ರಭುತ್ವದ ಆದೇಶದ ಮೇಲೆ ಕದ್ದು ಕೇಳಿ, ಅಧಿಕಾರಸ್ಥರಿಗೆ ಮಾಹಿತಿ ಒದಗಿಸುವುದು ಜನತಂತ್ರ ವ್ಯವಸ್ಥೆಯಲ್ಲಿ ಅತ್ಯಂತ ಹೀನಾಯ ಸ್ವರೂಪದ ಅಧಿಕಾರದ ದುರುಪಯೋಗ ಎನ್ನುವುದರಲ್ಲಿ ಅನುಮಾನವೇ ಇಲ್ಲ. ದರೋಡೆಗಾರರು, ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿರುವವರು, ವಿದ್ರೋಹಿಗಳ ಚಲನವಲನ ತಿಳಿಯುವ ಸದುದ್ದೇಶದಿಂದ ಟೆಲಿಫೋನ್‌ಗಳಿಗೆ ಕಳ್ಳಕಿವಿಯನ್ನು ಜೋಡಿಸುವ ಅಧಿಕಾರವನ್ನು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಒದಗಿಸಲಾಗಿದೆ. ಆದರೆ ಅವರು ಅದಕ್ಕೆ ರಾಜಕೀಯ ಅಧಿಕಾರಸ್ಥರ ಲಿಖಿತ ಆದೇಶವನ್ನು ಪಡೆದಿರಬೇಕು. ಪ್ರತಿಯೊಂದು ಸರ್ಕಾರದಲ್ಲೂ ಇಂತಹ ಆದೇಶ ನೀಡುವ ಅಧಿಕಾರವನ್ನು ಒಬ್ಬ ಅಧಿಕಾರಿಗೆ ನೀಡಲಾಗಿರುತ್ತದೆ.

ಈಗ ಔಟ್‌ಲುಕ್ ಪತ್ರಿಕೆಯ ವರದಿಯಲ್ಲಿ ಆರೋಪ ಪ್ರಕಟವಾಗಿರುವುದು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದಂತೆ. ಕೇಂದ್ರ ಸರ್ಕಾರದಲ್ಲಿ ಇಂತಹ ಬೇಹುಗಾರಿಕೆಯ ಜವಾಬ್ದಾರಿಯನ್ನು ಹೊತ್ತಿರುವ ಒಂದು ವಿಶೇಷ ಸಂಸ್ಥೆಯೇ ಇದೆ. ಅದು ಪ್ರಧಾನಿಯ ನೇರ ಉಸ್ತುವಾರಿಯಲ್ಲೇ ಕೆಲಸ ಮಾಡುವ ಸಂಸ್ಥೆ. ಸರ್ಕಾರದ ಪರವಾಗಿ ಭಾನುವಾರದವರೆಗೂ ಅಧಿಕೃತವಾಗಿ ಯಾವ ಪ್ರಮುಖರೂ ಟೆಲಿಫೋನ್‌ಗೆ ಕಳ್ಳಕಿವಿ ಜೋಡಣೆಯ ಸಂಬಂಧದ ವರದಿಯನ್ನು ನಿರಾಕರಿಸಿಲ್ಲ. ಸೋಮವಾರ ಸಂಸತ್ತಿನಲ್ಲಿ ಸರ್ಕಾರ ತಳೆಯುವ ನಿಲವು ನಿಜಕ್ಕೂ ಕುತೂಹಲಕಾರಿ.

ಸಹಜವಾಗಿಯೇ ಈ ವರದಿ ಕುರಿತಂತೆ ವಿಶೇಷ ತನಿಖೆಗೆ ಪ್ರತಿಪಕ್ಷಗಳು ಒತ್ತಾಯಪಡಿಸಲಿವೆ. ಸರ್ಕಾರ ಅದನ್ನು ಸುಲಭವಾಗಿ ಒಪ್ಪುವ ಸ್ಥಿತಿಯಲ್ಲಂತೂ ಇಲ್ಲ. ಈಗ ಪ್ರಕಟವಾಗಿರುವ ಆರೋಪದ ಹಿನ್ನೆಲೆಯ ಅಂಶವಾಗಿ ದೇಶದಲ್ಲಿ ಹಿಂದೆ ನಡೆದ ಇಂತಹ ಪ್ರಕರಣಗಳ ಚರ್ಚೆಯಾಗುತ್ತಿರುವುದೂ ಸಹಜ.

ಕರ್ನಾಟಕದಲ್ಲಿ ಜನತಾ ಪಾರ್ಟಿಯ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ದೇವೇಗೌಡರು, ಅಜಿತ್ ಸಿಂಗ್ ಅವರಂಥವರ ಟೆಲಿಫೋನ್‌ಗಳಿಗೆ ಕಳ್ಳಕಿವಿ ಜೋಡಿಸಿದ ಕ್ರಿಯೆಗೆ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನವನ್ನೇ ಬಿಡಬೇಕಾಗಿ ಬಂದಿತ್ತು.

ಆಗಿನ ಮುಖ್ಯಮಂತ್ರಿ ಹೆಗಡೆ ವಿರೋಧೀ ಗುಂಪಿನ ನಾಯಕರಾಗಿದ್ದ ದೇವೇಗೌಡರು ಹಾಗೂ ಜನತಾ ಪಾರ್ಟಿಯ ಅಧ್ಯಕ್ಷ ಅಜಿತ್ ಸಿಂಗ್ ಅವರ ನಡುವಣ ಟೆಲಿಫೋನ್ ಸಂಭಾಷಣೆಯನ್ನು ಎರಡು ಪತ್ರಿಕೆಗಳು ಯಥಾವತ್ತಾಗಿ ಪ್ರಕಟಿಸಿದ್ದೇ ಹೆಗಡೆ ಅವರ ಕೊರಳಿಗೆ ಉರುಳಾಗಿದ್ದು. ಆದರೆ ಆ ವಿಚಾರದಲ್ಲಿ ಸರ್ಕಾರ ತನಿಖೆ ನಡೆಸಲಿಲ್ಲ. ಲೋಕಸಭೆಯ ಭರವಸೆಗಳ ಸಮಿತಿಯ ಅಧ್ಯಕ್ಷರಾಗಿದ್ದ ಡಾ। ಸುಬ್ರಹ್ಮಣ್ಯನ್ ಸ್ವಾಮಿ (ಆಗ ಅವರೂ ಜನತಾ ಪಾರ್ಟಿಯವರೇ) ಒಂದು ವಿಶಿಷ್ಟ ನಿಯಮದಂತೆ, ಭವಿಷ್ಯದಲ್ಲಿ ಇಂತಹ ಪ್ರಕರಣಗಳು ನಡೆಯದಂತೆ ವ್ಯವಸ್ಥೆಯಾಗಬೇಕೆಂದು ಒತ್ತಾಯಪಡಿಸಲು ಸಂಪರ್ಕ ಇಲಾಖೆಯಿಂದ ಸಮಗ್ರ ದಾಖಲೆಗಳನ್ನೂ ತರಿಸಿಕೊಂಡು, ಅನಂತರ ಕರ್ನಾಟಕದಲ್ಲಿ ಮುಖ್ಯ ಕಾರ್ಯದರ್ಶಿಯ ವಿಚಾರಣೆಯನ್ನೂ ನಡೆಸಿದ್ದರು.

ಈ ವಿಚಾರದಲ್ಲಿ ಸುಬ್ರಹ್ಮಣ್ಯನ್ ಸ್ವಾಮಿ ಅವರ ನೇತೃತ್ವದ ಸಮಿತಿಯ ಶಿಫಾರ್ಸುಗಳನ್ನು ಸರ್ಕಾರ ಪರಿಶೀಲಿಸಿ, ಹಲವು ನಿರ್ಧಾರಗಳನ್ನೂ ಪ್ರಕಟಿಸಿತ್ತು. ಆದರೇನಂತೆ, ಅಧಿಕಾರದ ಸೂತ್ರಗಳನ್ನು ಹಿಡಿದವರು ತಮಗೆ ಬೇಕಾದಾಗ ಟೆಲಿಫೋನ್‌ಗಳಿಗೆ ಕಳ್ಳಕಿವಿಗಳನ್ನು ಜೋಡಿಸಲು ಆದೇಶ ನೀಡಿ, ತಮಗೆ ಬೇಕಾದ ಮಾಹಿತಿಯನ್ನು ಸಂಗ್ರಹಿಸುವುದು ನಿಂತಿಲ್ಲ. ಇದೇ ಸಮಯದಲ್ಲೇ ಜಾತ್ಯತೀತ ಜನತಾದಳದ ಪ್ರದೇಶ ಸಮಿತಿಯ ಅಧ್ಯಕ್ಷ ಹಾಗೂ ಲೋಕಸಭೆ ಸದಸ್ಯ ಎಚ್.ಡಿ. ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಯಡಿಯೂರಪ್ಪ ಸರ್ಕಾರವೂ ತನ್ನ ವಿರೋಧಿಗಳ ಟೆಲಿಫೋನ್‌ಗಳಿಗೆ ಕಳ್ಳಕಿವಿಯನ್ನು ಜೋಡಿಸಿರುವ ಆರೋಪವನ್ನು ಮಾಡಿದ್ದಾರೆ.

ಔಟ್‌ಲುಕ್ ಪತ್ರಿಕೆಯ ವಿಶೇಷ ತನಿಖಾ ವರದಿಯಲ್ಲಿ, ಆರೋಪಕ್ಕೆ ಬೆಂಬಲವಾಗಿ ಸಾಕ್ಷ್ಯ– ಆಧಾರಗಳನ್ನೂ ಪ್ರಕಟಿಸಲಾಗಿದೆ. ಅಂತಹ ಸಾಕ್ಷ್ಯ– ಆಧಾರ ಸಾಕೇ ಎನ್ನುವ ವಿಚಾರ ಬೇರೆ. ಶನಿವಾರ ರಾತ್ರಿಯ ಒಂದು ಟಿವಿ ಕಾರ್ಯಕ್ರಮದಲ್ಲಿ ಔಟ್‌ಲುಕ್ ಪತ್ರಿಕೆಯ ಪ್ರಧಾನ ಸಂಪಾದಕರು ಒಂದು ಟೇಪನ್ನೂ ಪ್ರದರ್ಶಿಸಿದ್ದರು. ಆದರೆ ಕುಮಾರಸ್ವಾಮಿ ಅವರು ತಮ್ಮ ಆರೋಪಕ್ಕೆ ಬೆಂಬಲ ನೀಡುವಂತಹ ಯಾವ ವಿವರಗಳನ್ನೂ ನೀಡಿಲ್ಲ, ಆರೋಪಕ್ಕಾಗಿ ಆರೋಪ ಎನ್ನುವ ರೀತಿಯಲ್ಲಿ ಆರೋಪ ಮಾಡಿದಂತಿದೆ. ಲೋಕಸಭೆಯ ಸದಸ್ಯರಾಗಿ ಕುಮಾರಸ್ವಾಮಿ ಅವರಂಥ ನಾಯಕರು ಇಂಥ ಆರೋಪಗಳನ್ನು ಮಾಡುವ ಮುನ್ನ ಸಾಧ್ಯವಿರುವಷ್ಟೂ ಮಾಹಿತಿಯನ್ನು ಸಂಗ್ರಹಿಸಿರುತ್ತಾರೆನ್ನುವುದು ಮುಗ್ಧ ಜನಸಮುದಾಯಗಳ ನಂಬಿಕೆ. ಕುಮಾರಸ್ವಾಮಿ ತಮ್ಮಲ್ಲಿರುವ ವಿವರಗಳನ್ನು ಪ್ರಕಟಿಸಿದರೆ ಅವರ ಆರೋಪವನ್ನು ಆಮೂಲಾಗ್ರವಾಗಿ ತನಿಖೆ ನಡೆಸುವುದು ಕೇಂದ್ರ ಸರ್ಕಾರಕ್ಕೆ ಕಷ್ಟವಾಗುವುದಿಲ್ಲ. ಸಂಪರ್ಕ ಇಲಾಖೆಯ ಮೇಲಿನ ಸಾರ್ವಭೌಮಾಧಿಕಾರ ಕೇಂದ್ರ ಸರ್ಕಾರದ್ದೇ. ಈಗ ಅದು ಡಿಎಂಕೆ ಮಂತ್ರಿಯ ಕೈಲೇ ಇದೆ. ಗೃಹ ಸಚಿವ ಚಿದಂಬರಮ್‌ಅವರೇನೂ ಬಿಜೆಪಿಯ ಮಿತ್ರರಲ್ಲ. ಕುಮಾರಸ್ವಾಮಿ ತಮ್ಮ ಆರೋಪ ವಿಚಾರದಲ್ಲಿ ಮಾಹಿತಿಯನ್ನು ಒದಗಿಸಿದರೆ ಮಹದುಪಕಾರವಾಗುತ್ತದೆ. ಯಾರೋ ಮಂತ್ರಿ ಟೆಲಿಫೋನ್‌ನಲ್ಲಿ ಮಾತನಾಡುವುದು ಬೇಡ ಎಂದು ಹೆದರಿ ಹೇಳಿದ ಮಾತನ್ನೇ ನಂಬಿ ಗುರುತರವಾದ ಆರೋಪವನ್ನು ಹೊರಿಸುವುದು ಸಂಸದರಾದವರಿಗೆ ಸಲ್ಲದ ವರ್ತನೆ.

ಗೂಫ

ಆಲಿ(ಬಂಡೆ) ಕಲ್ಲು ಮಳೆ



ಪತ್ರ ಪ್ರಭ

ವಿಳಾಸ : ಪತ್ರ ಪ್ರಭ ವಿಭಾಗ, ಕನ್ನಡ ಪ್ರಭ, ಕ್ವೀನ್ಸ್ ರಸ್ತೆ, ಬೆಂಗಳೂರು–560001

### ಸಮರ್ಪಕ ಕಬ್ಬಿನ ಬೆಲೆ ನಿಗದಿಗೊಳಿಸಿ

ರಾಜ್ಯದಲ್ಲಿ 55 ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ದಿನ ಸಾಮರ್ಥ್ಯ 152.00 ಲಕ್ಷ ಟನ್ ಇದ್ದು 2008–09ರಲ್ಲಿ 518.32 ಲಕ್ಷ ಟನ್ ಕಬ್ಬನ್ನು ಅರೆಯಬೇಕಾಗಿತ್ತು. ಆದರೆ ವರ್ಷದಲ್ಲಿ ಅರೆದ ಕಬ್ಬು ಕೇವಲ 71.10 ಲಕ್ಷ ಟನ್, ಬಹುತೇಕ ಕಾರ್ಖಾನೆಗಳು ಸಾಮರ್ಥ್ಯಕ್ಕೆ ತಕ್ಕಂತೆ ಕಬ್ಬು ಅರೆಯುತ್ತಿಲ್ಲ. ಜನಿಕ, ಜಂಟಿ, ಸಹಕಾರಿ ಹಾಗೂ ಖಾಸಗಿ ವಲಯದಲ್ಲಿ 52 ಕಾರ್ಖಾನೆಗಳಿದ್ದು 13 ಕಾರ್ಖಾನೆಗಳು 27.11 ಕೋಟಿ ಲಾಭದಲ್ಲಿವೆ. 10 ಕಾರ್ಖಾನೆಗಳು 57.73 ಕೋಟಿ ಹಾನಿಗಳಲ್ಲಿವೆ. 21 ಕಾರ್ಖಾನೆಗಳು 1362.57 ಕೋಟಿ ಕೂಡಿ ಬಿದ್ದ ಹಾನಿಯಲ್ಲಿವೆ. 9 ಕಾರ್ಖಾನೆಗಳು ಲಾಭ ಗಳಿಸಿದ್ದರೂ ಕೂಡಿ ಬಿದ್ದ ಹಾನಿಯಲ್ಲಿವೆ.

(3) ಸಾರ್ವಜನಿಕ ವಲಯದ 2 ಜಂಟಿ ವಲಯದ 1 ಸಹಕಾರಿ ವಲಯದ 23 ಒಟ್ಟು 26 ಕಾರ್ಖಾನೆಗಳಲ್ಲಿ 2008–09ರಲ್ಲಿ 13 ಕಾರ್ಖಾನೆಗಳು 43.44 ಕೋಟಿ ಲಾಭ ಗಳಿಸಿದ್ದು 10 ಕಾರ್ಖಾನೆಗಳು 73.31 ಕೋಟಿ ಹಾನಿಗೊಳಿಸಿದ್ದು 31–3–09ಕ್ಕೆ 21 ಕಾರ್ಖಾನೆಗಳ ಒಟ್ಟು ಹಾನಿ ಹಾನಿಯು 1408.14 ಕೋಟಿ ಇರುತ್ತದೆ.

(4) ಕಬ್ಬಿನ ಕಾರ್ಖಾನೆಗಳು ಸಾಮರ್ಥ್ಯಕ್ಕೆ ತಕ್ಕಂತೆ ಕಬ್ಬನ್ನು ನುರಿಸುತ್ತಿಲ್ಲ, ವರ್ಷದಲ್ಲಿ 340 ದಿನ ಕಬ್ಬು ನುರಿಸುತ್ತಿಲ್ಲ. ಕಾರ್ಮಿಕರ ಸದುಪಯೋಗ ಮಾಡುತ್ತಿಲ್ಲ. ಸಕ್ಕರೆ ಇಳುವರಿ ಕನಿಷ್ಠ ಶೇ. 6.97 ಇದೆ ಗರಿಷ್ಠ ಇಳುವರಿ ಶೇ. 11.13 ಇದೆ. ಕಾರ್ಖಾನೆಗಳ ಹಾನಿ ಪ್ರತಿ ವರ್ಷ ಹೆಚ್ಚುತ್ತಿದೆ. ಸಕ್ಕರೆಯ ಇಳುವರಿ ಪ್ರತಿ ವರ್ಷ ಕಡಿಮೆಯಾಗುತ್ತಿದೆ. ಸಹಕಾರಿ ವಲಯದ ಒಂದು ಕಾರ್ಖಾನೆ 2008–09ರಲ್ಲಿ ವಾರ್ಷಿಕ ಹಾನಿ 12.03 ಕೋಟಿ ಹೊಂದಿದ್ದು 31.3.2009ಕ್ಕೆ 112.57 ಕೋಟಿ ಕೂಡಿ ಬಿದ್ದ ಹಾನಿ ಹೊಂದಿದೆ. ಅಧಿಕೃತ ಮಾಹಿತಿಯ ವಸ್ತುಸ್ಥಿತಿ ಹೀಗಿರುವಾಗ ಸಕ್ಕರೆ ಕಾರ್ಖಾನೆಗಳು ಎಲ್ಲಾ ಹೇಗೆ ಲಾಭ ಗಳಿಸಬೇಕು ಹಾಗೂ ಯಾವ ಲಾಭದಲ್ಲಿ ಯಾವ ಲಾಭಾಂಶದಲ್ಲಿ ಶೇ. 60ರಷ್ಟು ಪಾಲನ್ನು ರೈತರಿಗೆ ಮತ್ತು 40ರಷ್ಟು ಪಾಲನ್ನು ಕಾರ್ಖಾನೆ ಮಾಲಿಕರಿಗೆ ಅಥವಾ ಕಾರ್ಖಾನೆಗಳಿಗೆ ಹೇಗೆ ಕೊಡಲಿಕ್ಕೆ ಸಾಧ್ಯವಿದೆ? ಈ ಎಲ್ಲಾ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಹಾಗೂ ರಾಜ್ಯದ **sap** ದರ ನಿಗದಿ ಮಾಡಿ ಕಬ್ಬು ಬೆಳೆಗಾರರಿಗೆ ಉಪಕಾರ ಮಾಡಬೇಕಾಗಿದೆ.

– **ಬಿ.ಜಿ. ಬಣಕಾರ,** ವಿಧಾನಸಭೆ ಮಾಜಿ ಅಧ್ಯಕ್ಷ

ಐಪಿಎಲ್ ವಿವಾದದ ಮಧ್ಯೆಯೇ ಕೆಲ ರಾಜಕೀಯ ನಾಯಕರ ಕರೆಗಳನ್ನು ಕೇಂದ್ರ ಸರ್ಕಾರ ಕದ್ದು ಆಲಿಸಿದೆ ಎನ್ನಲಾದ ಹಗರಣವೊಂದು ಬಯಲಿಗೆ ಬಂದಿದೆ. ಯುಪಿಎ ಸರ್ಕಾರ ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್, ಸಿಪಿಎಂ ಕಾರ್ಯದರ್ಶಿ ಪ್ರಕಾಶ್ ಕಾರಟ್ ಅಷ್ಟೇ ಅಲ್ಲ, ಕೇಂದ್ರ ಕೃಷಿ ಸಚಿವ ಶರದ್ ಪವಾರ್ ಹಾಗೂ ಕಾಂಗ್ರೆಸ್‌ನವರೇ ಆದ ದಿಗ್ವಿಜಯ್ ಸಿಂಗ್ ಅವರ ಫೋನ್‌ಗೂ 'ಕಳ್ಳಗಿವಿ'ಯಿಟ್ಟಿದೆ ಎನ್ನಲಾಗಿದೆ. ಪ್ರಕರಣ ಹೊರ ಬೀಳುತ್ತಿದ್ದಂತೆ ಸರ್ಕಾರದ ವಿರುದ್ಧ ತಿರುಗಿ ಬಿದ್ದಿರುವ ವಿಪಕ್ಷಗಳು ಸಂಸತ್‌ನಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಸಜ್ಜಾಗಿವೆ. ಈ ಹಿನ್ನೆಲೆಯಲ್ಲಿ ಏನಿದು ಕಳ್ಳಗಿವಿ ಪ್ರಕರಣ... ಇದನ್ನು ಯಾರು ಮಾಡುತ್ತಾರೆ... ಹೇಗೆ ಮಾಡುತ್ತಾರೆ.. ಎಂಬುದುರ ಕುರಿತು ಮಾಹಿತಿ ಇಲ್ಲಿದೆ.



# ಕಳ್ಳಗಿವಿ ಮೇಲೊಂದು ಕಣ್ಣು



ರಾಜಕೀಯ ನಾಯಕರ ಮಾತಿಗೆ ಕಿವಿ ಇಟ್ಟಿತೇ ಕೇಂದ್ರ?

### ಕಳ್ಳಗಿವಿ ಹೇಗೆ ಕಾರ್ಯನಿರ್ವಹಿಸುತ್ತದೆ?

ಭಾರತ ಭಯೋತ್ಪಾದಕತೆಯಿಂದ ನರಳುತ್ತಿರುವ ಸಂದರ್ಭದಲ್ಲಿ ಅತ್ಯಂತ ಮುಖ್ಯವಾಗಿ ಬೇಕಾಗಿರುವ ವ್ಯವಸ್ಥೆ 'ಕಾಲ್ ಮಾನಿಟರಿಂಗ್'. ಟೆಲಿಕಾಂ ಕಂಪನಿಗಳು ಹೇಳುವ ಪ್ರಕಾರ ಪ್ರತಿ ನಗರದಲ್ಲಿ ಈ ಕಂಪನಿಗಳು ಕಾಲ್ ಮಾನಿಟರ್ ಮಾಡಲೆಂದೇ 20–20 ಅಡಿ ಸುತ್ತಳತೆಯ ಒಂದು ಕೊಠಡಿ ಹಾಗೂ ವಿವಿಧ ಭದ್ರತಾ ಸಂಸ್ಥೆಗಳಿಗೆ ಸೇರಿದ 8 ಕಂಪ್ಯೂಟರ್‌ಗಳನ್ನು ವ್ಯವಸ್ಥೆ ಮಾಡಿಕೊಡಬೇಕು. ಈ ಕಂಪ್ಯೂಟರ್‌ಗಳು ಆ ನಗರ ವ್ಯಾಪ್ತಿಯ ಒಂದೇ ಒಂದು ಕರೆ, ಎಸ್‌ಎಂಎಸ್, ಚಾಟಿಂಗ್, ಇಮೇಲ್ ಅಥವಾ ಇನ್ನಿತರ ಯಾವುದೇ ಸಂಪರ್ಕ ವ್ಯವಸ್ಥೆಯನ್ನು ಬಿಡದೇ ರೆಕಾರ್ಡ್ ಮಾಡಿಕೊಳ್ಳುತ್ತೆ. ನೀವು ನಿಮ್ಮೊಲವಿನ ಹುಡುಗಿ ಹತ್ತಿರವಾದರೂ ಮಾತನಾಡಿ, ತಾಯಿ ಜೊತೆ ಪ್ರೀತಿಯಿಂದಾದರೂ ಮಾತಾಡಿ, ಬ್ಯುಸಿನೆಸ್ ಪಾರ್ಟನರ್ ಜೊತೆ ಗೌಪ್ಯ ಸಂಗತಿಗಳನ್ನಾದರೂ ಚರ್ಚೆ ಮಾಡಿ, ಇಲ್ಲಿ ಎಲ್ಲವೂ ರೆಕಾರ್ಡ್ ಆಗಿರುತ್ತೆ. ಒಂದು ವಿಷಯ ತಿಳಿದಿರಲಿ, ಗುಪ್ತಚರ ಸಂಸ್ಥೆಗಳು ಹೇಳುವ ಪ್ರಕಾರ ಈ ರೆಕಾರ್ಡ್ ಆಗಿರುವ ಮಾಹಿತಿಗಳ ಮೇಲೆ ಕೇಂದ್ರ ಹಾಗೂ ರಾಜ್ಯ ಗೃಹ ಸಚಿವರಿಗೆ ಅಧಿಕಾರವಿರುತ್ತೆ. ಅವರು ಯಾವುದೇ ಕರೆಯ ಬಗೆಗಿನ ಮಾಹಿತಿಯನ್ನು ಬೇಕಾದರೂ ತರಿಸಿಕೊಳ್ಳಬಹುದು. ಈ ವ್ಯವಸ್ಥೆ ಭಾರತಕ್ಕೆ ಬಂದಿದ್ದು 2006ರಲ್ಲಿ. ಇನ್ನೂ ಒಂದು ಒಂದು ಸಂಗತಿ ಎಂದರೆ ಮುಸ್ಲಿಮರ ಜನಸಂಖ್ಯೆ ಹೆಚ್ಚಿರುವ ಸ್ಥಳಗಳಲ್ಲಿ ಕಾಲ್ ಮಾನಿಟರ್ ಕೇಂದ್ರಗಳು ಇದ್ದೇ ಇರುತ್ತವೆ. ಸದ್ಯ ಭಾರತದಲ್ಲಿ ಬೆಂಗಳೂರು, ದೆಹಲಿ, ಲಖನೌ, ಮುಂಬೈ, ಹೈದರಾಬಾದ್, ಕೋಲ್ಕತ್ತಾಗಳಲ್ಲಿ ವಿಚಕ್ಷಣೆ ಮಾಡಲಾಗುತ್ತಿರುತ್ತದೆ.

### ಪ್ರಮುಖ ಪ್ರಕರಣಗಳು

ಭಾರತದ ರಾಷ್ಟ್ರಪತಿಯಾಗಿದ್ದ ಜೈಲ್‌ಸಿಂಗ್ ರಾಜೀವ್‌ಗಾಂಧಿ ಸರ್ಕಾರದ ವಿರುದ್ಧ ಕಳ್ಳಗಿವಿ ಕುರಿತಂತೆ ಗಂಭೀರ ಆರೋಪ ಮಾಡಿದ್ದರು. ಪ್ರಧಾನಿ ರಾಜೀವ್‌ಗಾಂಧಿ ತಮ್ಮ ರಾಜಕೀಯ ವಿರೋಧಿಗಳು ರಾಷ್ಟ್ರಪತಿಗಳೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎಂಬ ಬಗ್ಗೆ ರಾಷ್ಟ್ರಪತಿ ಭವನದ ಫೋನ್‌ಕಾಲ್‌ಗಳನ್ನೇ ಟ್ಯಾಪ್ ಮಾಡಿದ್ದರು ಎಂದು ಆಪಾದಿಸಿದ್ದರು.



1988ರಲ್ಲಿ ಕರ್ನಾಟಕ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಸರ್ಕಾರ ರಾಜಕೀಯ ವಿರೋಧಿಗಳ ಫೋನ್‌ಟ್ಯಾಪಿಂಗ್ ಮಾಡಿದ ಆರೋಪಕ್ಕೆ ಸಿಲುಕಿ ಉರುಳಿಬಿದ್ದಿತ್ತು.

ಮಾಜಿ ಪ್ರಧಾನಿ ಚಂದ್ರಶೇಖರ್, ತಮ್ಮ ದೂರವಾಣಿ ಕರೆಗಳನ್ನು ಪ್ರಧಾನಿ ವಿ.ಪಿ. ಸಿಂಗ್ ನೇತೃತ್ವದ ಸರ್ಕಾರ ಕದ್ದಾಲಿಸುತ್ತಿದೆ ಎಂದು ಪ್ರಧಾನಿಯಾಗುವುದಕ್ಕೂ ಮುನ್ನ ಆರೋಪಿಸಿದ್ದರು.

2005ರಲ್ಲಿ ಕೆಲವರು ತಮ್ಮ ಹಾಗೂ ಮುಲಾಯಂ ಹಾಗೂ ಅಖಿಲೇಶ್ ಯಾದವ್‌ರ ದೂರವಾಣಿಗಳನ್ನು ಕದ್ದಾಲಿಕೆ ಮಾಡಲಾಗುತ್ತಿದೆ ಎಂದು ಹೇಳಿದ್ದರು ಎಂದು ಅಂದಿನ ಎಸ್ಪಿ ನಾಯಕ ಅಮರ್‌ಸಿಂಗ್ ಆರೋಪಿಸಿದ್ದರು.

### ಕರೆ ನಿರ್ವಹಣೆ

ಟೆಲಿಕಾಂ ಕಂಪನಿಗಳೇ 20–20 ಅಡಿ ಸುತ್ತಳತೆಯ ಕೊಠಡಿ, 8 ಕಂಪ್ಯೂಟರ್‌ಗಳನ್ನು ನೀಡಬೇಕು

ಈ ಕಂಪ್ಯೂಟರ್‌ಗಳು ಐಬಿ, ಡಿಆರ್‌ಐ, ಸಿಬಿಐ ಹಾಗೂ ಇತರೆ ಭದ್ರತಾ ಸಂಸ್ಥೆಗಳಿಗೆ ಸೇರಿರುತ್ತವೆ.

ಈ ಕಂಪ್ಯೂಟರ್‌ಗಳು ಎಲ್ಲಾ ಕಾಲ್‌ಗಳ ವಿವರ ಹಾಗೂ ರೆಕಾರ್ಡ್ ಮಾಡಿಕೊಳ್ಳಬಲ್ಲವಾಗಿರುತ್ತವೆ.

**ದೂರವಾಣಿ ಕದ್ದಾಲಿಕೆ ಕಾನೂನು ಬದ್ಧವೇ?**

■ **ಅಮೆರಿಕ**
ಯಾವುದಾದರೂ ಒಂದು ಸಂಸ್ಥೆ ದೂರವಾಣಿ ಕರೆಗಳ ರೆಕಾರ್ಡ್ ಮಾಡಿಕೊಳ್ಳಬಹುದು. ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಇದು ಚಾಲ್ತಿಯಲ್ಲಿದೆ.

■ **ಭಾರತ**
ಫೋನ್ ಕದ್ದು ಆಲಿಸುವ ಹಕ್ಕು ಗುಪ್ತಚರ ಸಂಸ್ಥೆಗಳಿಗೆ ಮಾತ್ರವಿದೆ. ಆದರೆ, ಇದಕ್ಕೂ ಮೊದಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಬೇಕು.

■ **ಬ್ರಿಟನ್**
ಇಲ್ಲಿ ಎಂ15, ಎಂ16 ಹಾಗೂ ಪೊಲೀಸರಿಗೆ ದೂರವಾಣಿಗಳಿಗೆ ಕಳ್ಳಗಿವಿ ಇಡುವ ಅಧಿಕಾರವಿದೆ.

■ **ಜರ್ಮನಿ**
ಅಕ್ರಮವಾಗಿ ದೂರವಾಣಿ ಕದ್ದಾಲಿಕೆ ಮಾಡಿದರೂ ಕೋರ್ಟ್‌ಗಳು ಸ್ವೀಕರಿಸುತ್ತವೆ. ಆದರೆ ಕದ್ದಾಲಿಕೆ ಮಾಡಿದ ಸಂಸ್ಥೆ ಮೇಲೂ ಕ್ರಮ ತೆಗೆದುಕೊಳ್ಳಲಾಗುತ್ತದೆ.

### ಏನಿದು ಎನ್‌ಟಿಆರ್‌ಓ?

ಎನ್‌ಟಿಆರ್‌ಓ ಎಂದರೆ 'ನ್ಯಾಷನಲ್ ಟೆಕ್ನಿಕಲ್ ರಿಸರ್ಚ್ ಆರ್ಗನೈಜೇಷನ್' ಅರ್ಥಾತ್ ರಾಷ್ಟ್ರೀಯ ತಾಂತ್ರಿಕ ಸಂಶೋಧನಾ ಸಂಸ್ಥೆ. ಈಗ ಕೇಳಿ ಬರುತ್ತಿರುವ ಕಳ್ಳಗಿವಿ ಪ್ರಕರಣದ ಹಿಂದಿರುವ ಸಂಸ್ಥೆ ಇದು. ಕಾರ್ಗಿಲ್ ಯುದ್ಧದ ವೇಳೆ ಗುಪ್ತಚರ ವ್ಯವಸ್ಥೆ ಸಂಪೂರ್ಣವಾಗಿ ವಿಫಲಗೊಂಡಿತ್ತು. ಹಾಗಾಗಿ, ತಾಂತ್ರಿಕ ಸೌಲಭ್ಯಗಳನ್ನು ಬಳಸಿಕೊಂಡು ಗುಪ್ತಚರ ಮಾಹಿತಿ ಕಲೆ ಹಾಕಲು ಈ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಸಂಸ್ಥೆ ಜನ್ಮತಳೆದ 6 ವರ್ಷಗಳಾದರೂ ಹೇಳಿಕೊಳ್ಳುವಂಥ ಕಾರ್ಯವನ್ನು ಮಾಡಿಲ್ಲ. ಬದಲಾಗಿ ಸ್ವಜನ ಪಕ್ಷಪಾತ, ಅವ್ಯವಹಾರಗಳು ಹೆಚ್ಚಾಗಿ ನಡೆದಿವೆ. ಹಾಗಾಗಿಯೇ ಸ್ವತಂತ್ರ ಭಾರತದ ಗುಪ್ತಚರ ಸಂಸ್ಥೆಗಳ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಭಾರತದ ಮಹಾಲೆಕ್ಕ ಪರಿಶೋಧಕರ ತನಿಖೆಗೆ ಒಳಗಾದ ಸಂಸ್ಥೆ ಎಂಬ ಕುಖ್ಯಾತಿಗೆ ಒಳಗಾಗಿದೆ. ಹಾಗಾಗಿ ತನಿಖೆಗೆ ಪಿ.ವಿ.ಕುಮಾರ್ ನೇತೃತ್ವದ ಈ ಸಮಿತಿ ರಚಿಸಲಾಗಿದೆ. ಈ ಸಂಸ್ಥೆಯ ಎರಡನೇ ಮುಖ್ಯಸ್ಥರಾಗಿದ್ದ ಡಾ. ಎಂ.ಎಸ್.ವಿಜಯವರ್ಧನ್‌ರ ಅವ್ಯವಹಾರಗಳ ಬಗ್ಗೆ ಸಮಿತಿ ತನಿಖೆ ನಡೆಸುತ್ತಿದೆ.

### ದಿಗ್ವಿಜಯ್ ಸಿಂಗ್

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

**ಫೆಬ್ರವರಿ 2007**



ದಿಗ್ವಿಜಯ್ ಸಿಂಗ್ ಅವರು ದೆಹಲಿಯ ತಮ್ಮ ಮನೆಯಿಂದ ಸೌತ್ ಅವೆನ್ಯೂಗೆ ಕಾರಿನಲ್ಲಿ ಹೊರಟಿದ್ದರು. ಆಗ ಅವರು ಪಂಜಾಬ್‌ನ ಕಾಂಗ್ರೆಸ್‌ನ ನಾಯಕರೊಬ್ಬರ ಜತೆ ಮೊಬೈಲ್‌ನಲ್ಲಿ ಮಾತನಾಡುವಾಗ ಫೋನ್ ಕದ್ದು ಆಲಿಸಲಾಗಿದೆ. ಪಂಜಾಬ್ ಕಾರ್ಯಕಾರಿ ಸಮಿತಿಗೆ ತಮ್ಮ ಕಡೆಯ ಅಭ್ಯರ್ಥಿಗಳನ್ನು ಆಯ್ಕೆಗೆ ಬೆಂಬಲ ನೀಡುವಂತೆ ದಿಗ್ವಿಜಯ್‌ರನ್ನು ಪಂಜಾಬ್ ನಾಯಕ ಕೇಳಿಕೊಳ್ಳುತ್ತಾನೆ. ಇವರಿಬ್ಬರ ನಡುವೆ ನಡೆಯುವ ಎಲ್ಲ ಸಂಭಾಷಣೆ ಕದ್ದಾಲಿಕೆ ಮಾಡಲಾಗುತ್ತದೆ.

### ನಿತೀಶ್ ಕುಮಾರ್

ಬಿಹಾರ ಮುಖ್ಯಮಂತ್ರಿ

**ಅಕ್ಟೋಬರ್ 2007**



ಬಿಹಾರ ಸಿಎಂ ನಿತೀಶ್‌ಕುಮಾರ್ ದಿಲ್ಲಿಯ ಸಂಸತ್ತಿನ ಸೌತ್‌ಬ್ಲಾಕ್‌ನಲ್ಲಿ ಆಯೋಜಿಸಲಾಗಿದ್ದ ಮೀಟಿಂಗ್‌ನಲ್ಲಿ ಭಾಗವಹಿಸಲು ಸರ್ಕಾರಿ ಕಾರಿನಲ್ಲಿ ಬಿಹಾರ್ ಭವನದಿಂದ ಹೊರಡುತ್ತಾರೆ. ಈ ವೇಳೆ, ಬಿಹಾರ ರೆಸಿಡೆಂಟ್ ಕಮಿಷನರ್ ಜತೆ ಮೊಬೈಲ್‌ನಲ್ಲಿ ಮಾತನಾಡುತ್ತಾರೆ. ರಾಜ್ಯಕ್ಕೆ ಹೆಚ್ಚು ಅನುದಾನವನ್ನು ಹೇಗೆ ಪಡೆಯಬಹುದು ಎಂಬುದರ ಬಗ್ಗೆ ಕಮಿಷನರ್ ಜತೆ ಚರ್ಚಿಸುತ್ತಾರೆ. ಕೋಶಿ ನದಿಗೆ ಸಂಬಂಧಿಸಿದಂತೆಯೂ ಅವರು ಮಾತನಾಡುತ್ತಾರೆ. ಕದ್ದಾಲಿಕೆ ಮಾಡಲಾಗುತ್ತದೆ.

### ಶರದ್ ಪವಾರ್

ಕೇಂದ್ರ ಕೃಷಿ ಸಚಿವ

**ಏಪ್ರಿಲ್ 2010**



ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್) ವಿವಾದಕ್ಕೆ ಸಂಬಂಧಿಸಿದಂತೆ 15 ದಿನಗಳ ಹಿಂದೆ ಕೇಂದ್ರ ಕೃಷಿ ಸಚಿವ, ಎನ್‌ಸಿಪಿ ನಾಯಕ ಶರದ್ ಪವಾರ್ ಮತ್ತು ಐಪಿಎಲ್ ಕಮಿಷನರ್ ಲಲಿತ್ ಮೋದಿ ನಡುವಿನ ಸಂಭಾಷಣೆಯನ್ನು ಕಳ್ಳಗಿವಿಯಿಂದ ಆಲಿಸಲಾಗುತ್ತದೆ. ಐಪಿಎಲ್ ತಂಡಗಳ ಬಿಡ್ಡಿಂಗ್ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಇವರಿಬ್ಬರು ಮೊಬೈಲ್‌ನಲ್ಲಿ ಮಾತನಾಡುತ್ತಾರೆ. ಸಂಪೂರ್ಣ ಸಂಭಾಷಣೆಯನ್ನು ಆಲಿಸಲಾಗುತ್ತದೆ.

### ಪ್ರಕಾಶ್ ಕಾರಟ್

ಸಿಪಿಎಂ ಪ್ರಧಾನ ಕಾರ್ಯದರ್ಶಿ

**ಜುಲೈ 2008**



ಭಾರತ–ಅಮೆರಿಕ ನಾಗರಿಕ ಸಹಕಾರ ಅಣು ಒಪ್ಪಂದ ಕುರಿತಂತೆ ಯುಪಿಎ ಸರ್ಕಾರಕ್ಕೆ ನುಂಗಲಾರದ ತುತ್ತಾಗಿದ್ದ ಸಿಪಿಎಂ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಕೂಡಾ ಕಳ್ಳಗಿವಿಗೆ ಬಲಿಯಾಗುತ್ತಾರೆ. ಇದು ನಡೆದಿದ್ದು 2008 ಜುಲೈನಲ್ಲಿ. ಯುಪಿಎ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ತೆಗೆದುಕೊಳ್ಳುವ ಸಂದರ್ಭವದು. ಈ ವೇಳೆ, ಪ್ರಕಾಶ್ ಕಾರಟ್ ಅವರು ವಿವಿಧ ವಿಪಕ್ಷ ನಾಯಕರ ಜತೆ ನಡೆಸುವ ಸಂಭಾಷಣೆಯನ್ನು ಕಳ್ಳಗಿವಿಯಿಂದ ಸರ್ಕಾರ ಆಲಿಸುತ್ತದೆ.

■ ವಿನ್ಯಾಸ: ಸಾಗರ್ ಎಂ.ಎಸ್.

# ಬೀಜ ವೈವಿಧ್ಯ ರಕ್ಷಣೆಗೆ ಪ್ರಯತ್ನ ಅಗತ್ಯ

■ ಇಂದು ಅಂತಾರಾಷ್ಟ್ರೀಯ ಬೀಜ ದಿನಾಚರಣೆ



'ದೇಸಿ ತಳಿಗಳ ಬೀಜಗಳನ್ನು ರಕ್ಷಿಸಿ' ಎಂಬ ಆಂದೋಲನವನ್ನು ಪ್ರಾರಂಭಿಸುವ ಹಂತಕ್ಕೆ ನಾವಿಂದು ತಲುಪಬೇಕಾಗಿದೆ. ಇದಕ್ಕಾಗಿ ದಿನಾಚರಣೆಯನ್ನು ಮಾಡಬೇಕಾದ ಸ್ಥಿತಿ ಬಂದಿದೆ. 1500 ವರ್ಷಗಳಿಂದ ರಕ್ಷಿಸಿಕೊಂಡು ಬಂದಿದ್ದ ದೀರ್ಘ ಪರಂಪರೆಯನ್ನು 40 ವರ್ಷದಲ್ಲಿ ಕಳೆದುಕೊಳ್ಳಬೇಕಾಯಿತು.

ನಮ್ಮ ದೇಶದಲ್ಲಿ ರಾಗಿ, ಜೋಳ, ಸಜ್ಜೆ, ನವಣೆ, ಬತ್ತ, ಹತ್ತಿ, ತರಕಾರಿ.. ಹೀಗೆ ಎಲ್ಲದರಲ್ಲೂ ನಾನಾ ತಳಿಗಳು ಇದ್ದವು. ಅಲ್ಲಲ್ಲಿಯ ವಾತಾವರಣಕ್ಕೆ ಸರಿಯಾದ ತಳಿಗಳು ಇದ್ದವು. ಇವುಗಳನ್ನು ರೈತರು ತಮ್ಮದೇ ಆದ ರೀತಿಯಲ್ಲಿ ಸಂರಕ್ಷಿಸುತ್ತ ಬಂದಿದ್ದರು. ಹತ್ತಾರು ವರ್ಷದ ಹಿಂದಿನ ಬೀಜಗಳನ್ನು ಹೊಲದಲ್ಲಿ ಬಿತ್ತಿ ಬೆಳೆ ತೆಗೆಯುತ್ತಿದ್ದರು. ಆದರೆ ಇಂದು ಹೈಬ್ರಿಡ್ ಬೀಜದ ಹೊಡೆತಕ್ಕೆ ನಾಟಿ ಮತ್ತು ದೇಸಿ ತಳಿಗಳು ನಲುಗಿ ಹೋಗಿವೆ.

■ **ಪುನಾ ಬಳಕೆ ಅಸಾಧ್ಯ:** ವಿದೇಶಿ ಬೀಜ ಕಂಪನಿಗಳ ಕಪಿಮುಷ್ಟಿಗೆ ನಮ್ಮ ದೇಶದ ಕೃಷಿ ಸಿಲುಕಿದೆ. ಹಸಿರು ಕ್ರಾಂತಿಯ ನಂತರ ಇಲ್ಲಿದ್ದ ಅಪರೂಪದ ತಳಿಗಳು ನಾಶವಾಗುತ್ತ ಬಂತು. ಹೆಚ್ಚು ಇಳುವರಿಯ ಆಸೆಯನ್ನು ತೋರಿಸಿದರು. ಗೊಬ್ಬರ, ಕೀಟನಾಶಕ ಕಂಪನಿಗಳ ಲಾಭವನ್ನು ಹೆಚ್ಚಿಸಿದವು. ಇದನ್ನು ವ್ಯವಸ್ಥಿತವಾಗಿ ಕಂಪನಿಗಳು ಮಾಡಿದವು. ಪುನಾಬಳಕೆ ಮಾಡಲು ಬರದ ಬೀಜಗಳು ಹೆಚ್ಚಾದವು. ಹೀಗಾಗಿ ಪ್ರತಿ ಮಳೆಗಾಲದಲ್ಲಿ ರೈತರು ಬೀಜಕ್ಕಾಗಿ ಬೀದಿಯಲ್ಲಿ ಹೊಡೆದಾಟ ಮಾಡಿಕೊಳ್ಳಬೇಕಾಗಿ ಬಂದಿದೆ ಎನ್ನಬಹುದು.

■ **ದೇಸಿ ಬೀಜ ವೈವಿಧ್ಯ:** ಬತ್ತದ ತಳಿಗಳು ನಮ್ಮ ದೇಶದಲ್ಲಿದ್ದಷ್ಟು ಬೇರೆಲ್ಲೂ ಇರಲಿಲ್ಲ. ಇದನ್ನು ಗಮನಿಸಿದ ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿನ ತಳಿಗಳ ಪೇಟೆಂಟ್ ಪಡೆಯಲು ಪ್ರಾರಂಭಿಸಿದರು. ಸುಮಾರು 900 ತಳಿಗಳ ಪೇಟೆಂಟನ್ನು ಪಡೆದು ಕೊಂಡರು. ಛತ್ತೀಸ್‌ಗಡದ ಇಂದಿರಾಗಾಂಧಿ ಕೃಷಿ ವಿವಿಯಲ್ಲಿ ಸಂಗ್ರಹಿಸಲಾದ 2,200 ಅಧಿಕ ತಳಿಗಳ ಮೇಲೆ ತಮ್ಮ ಹಿಡಿತ ಸಾಧಿಸಲಿಕ್ಕೆ ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ.

ಹಸಿರು ಕ್ರಾಂತಿಗಿಂತಲೂ ಪೂರ್ವದಲ್ಲಿ 244 ತಳಿಗಳನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಆದರೆ ಇಂದು 160 ತಳಿಗಳನ್ನು ಮಾತ್ರ ಗುರುತಿಸಲಾಗಿದೆ. ಹೊಲಗಳಲ್ಲಿ ಸುಮಾರು ನೂರು ತಳಿಗಳನ್ನು ಬೆಳೆಯಲಾಗುತ್ತಿದೆ. ರಾಗಿಯಲ್ಲಿ 500 ವಿಧದ ತಳಿಗಳಿದ್ದವು ಎನ್ನುವುದಾಗಿ ದಾಖಲೆಗಳಿಂದ ತಿಳಿದುಬಂದಿದೆ. ಆದರೆ ಈಗ ಲಭ್ಯವಿರುವುದು 80 ತಳಿ ಮಾತ್ರ. ಔಷಧೀಯ ತಳಿಗಳು, ಪರಿಮಳದ ತಳಿಗಳು, ನೆರೆಯಲ್ಲಿ ಬೆಳೆಯುವ ತಳಿ, ಒಣ ಬೇಸಾಯ ತಳಿಗಳು ಇನ್ನು ಅನೇಕ ತಳಿಗಳು ಇದ್ದವು.

■ **ಸಾಂಪ್ರದಾಯಿಕ ಬೀಜ ರಕ್ಷಣೆ:** ಭಾರತ ಯಾವುದೇ ಹಳ್ಳಿಗಳಿಗೆ ಹೋದರೂ ಅಲ್ಲೊಂದು ಸಾಂಪ್ರದಾಯಿಕ ಪದ್ಧತಿಯಲ್ಲಿ ಬೀಜ ಸಂರಕ್ಷಣೆ ಮಾಡುತ್ತಿದ್ದಾರೆ. ಇಂದಿಗೂ ಕೂಡಾ ದಲಿತ, ಆದಿವಾಸಿಗಳು ಇದೇ ರೀತಿ ಅಪರೂಪದ ತಳಿಗಳ ಬೀಜವನ್ನು ರಕ್ಷಿಸಿಡುತ್ತಿದ್ದಾರೆ.

■ **ಸರ್ಕಾರ ಮತ್ತು ಸಂಘ ಸಂಸ್ಥೆಗಳ ಪ್ರಯತ್ನ:** ಕರ್ನಾಟಕ ಸರ್ಕಾರದ ಸಾವಯವ ಕೃಷಿ ಮಿಷನ್ ದೇಸಿ ಬೀಜ ಉಳಿಸಲಿಕ್ಕಾಗಿ ಪ್ರತಿ ತಾಲೂಕುಗಳಲ್ಲಿ 'ಜೀವನಿಧಿ' ಬೀಜ ಬ್ಯಾಂಕ್ ಸ್ಥಾಪಿಸಲಿಕ್ಕೆ ಅನುದಾನ ನೀಡುತ್ತದೆ.



ಚಿತ್ರ: ಜಿ. ಕೃಷ್ಣಪ್ರಸಾದ್

ಇವಲ್ಲದೆ ಸಹಜ ಸಮೃದ್ಧ, ಅನ್ನದಾನ, ಮಿಲ್ಲೆಟ್ ನೆಟ್‌ವರ್ಕ್ ಇಂಡಿಯಾ, ಮುಂತಾದ ಸರ್ಕಾರೇತರ ಸಂಸ್ಥೆಗಳು ದೇಸಿ ಬೀಜ ರಕ್ಷಣೆಗೆ ಪ್ರಯತ್ನ ನಡೆಸುತ್ತಿದೆ. ಬೆಳ್ತಂಗಡಿಯ ದೇವರಾವ್, ಶಿವಳ್ಳಿಯ ಬೋರೇಗೌಡ, ದಾವಣಗೆರೆಯ ಸರೋಜಮ್ಮ, ಕಿರುಗಾವಲಿನ ಮಹಮದ್ ಘನಿ ಅಪರೂಪದ ತಳಿ ರಕ್ಷಣೆ ಮಾಡುತ್ತಿದ್ದಾರೆ.

■ **ಕೊನೆಯಲ್ಲಿ:** ಪ್ರತಿವರ್ಷ ಏಪ್ರಿಲ್ 26ಕ್ಕೆ 'ಬೀಜ' ದಿನಾಚರಣೆಯನ್ನು ಆಚರಿಸುವ ಜೊತೆಗೆ ಸರ್ಕಾರದ ಮಟ್ಟದಲ್ಲಿ ಇಲ್ಲಿನ ವೈವಿಧ್ಯ ತಳಿಗಳ ರಕ್ಷಣೆ ಕಾರ್ಯವೂ ಆಗಬೇಕಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಗೂ ಕಡಿವಾಣ ಹಾಕುವುದು ಅಗತ್ಯವಾಗಿದೆ.

● ನಾಗರಾಜ ಮತ್ತಿಗಾರ